ಶ್ರೀ ಬಿ. ಎಸ್. ಯಡಿಯೂರಪ್ಪ — ಅಧ್ಯಕ್ಷರೆ, ತಂಬಾಕು ಖರೀದಿ ಮಾಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಬೇಕು.

(ಗೊಂದಲ)

MR. SPEAKER.— What is it going on in the House ? Whatever you wanted to tell, you have told What is this ?

SRI M. S. KRISHNAN.—Sir, am I to call the attention of the hon. Minister for Education ?

(INTERRUPTIONS)

MR. SPEAKER.— Nothing will go no record please.

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು.— ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ. ಎಸ್. ಕಾಳಮರಿಗೌಡ.— ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಂಬಾಕು ಖರೀದಿ ಮಾಡುವ ಬಗ್ಗೆ ಸರಿಯಾಗಿ ಉತ್ತರ ಹೇಳದಿದ್ದರೆ ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಎಲ್ಲ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಕಾಳಮರಿಗೌಡ.—ಅಧ್ಯಕ್ಷರೆ, ನಮಗೆ ಸರಿಯಾದ ಉತ್ತರ ಸಿಕ್ಕುವವರೆಗೂ ನಾವು ಧರಣಿ ಕುಳಿತುಕೊಳ್ಳುತ್ತೇವೆ.

(ಮಾನ್ಯ ಸದಸ್ಯರಾದ ಕೆ. ಎಸ್. ಕಾಳಮರಿಗೌಡರು ಮತ್ತು ಜೆ. ಡಿ. ಸೋಮಪ್ಪನವರು ಅಧ್ಯಕ್ಷ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)

ಶ್ರೀ ಬಿ. ರಾಚಯ್ಯ .— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಬಸವರಾಜುರವರು ಕೇಳಿರ ತಕ್ಕ ಪ್ರಶ್ನೆ ಏನೆಂದರೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ಪ್ರತಿಭಟನೆ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಅಲ್ಲಿ ನಾನು ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಸಾರ್ವಜನಿಕರೂ ಮತ್ತು ವಿದ್ಯಾರ್ಥಿಗಳೂ ಸರ್ಕಾರದ ಜೊತೆಯಲ್ಲಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.....

ಶ್ರೀ ಎಸ್.ಬಂಗಾರಪ್ಪ .— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು.....

ಅಧ್ಯಕ್ಷರು .— ತಾವು ಯಾವ ವಿಚಾರದಲ್ಲಿ ಮಾತನಾಡುತ್ತಿದ್ದೀರಿ ?

ಶ್ರೀ ಎಸ್.ಬಂಗಾರಪ್ಪ .— ಮಾನ್ಯ ಅಧ್ಯಕ್ಷರೆ, ನಾವು ಹೇಳುವುದನ್ನು ತಾವು ಕೇಳುವುದಕ್ಕೆ ಕಷ್ಟವಾದರೆ ನಾವು ಏನು ಮಾಡಬೇಕು ?

ಶ್ರೀ ಭೀಮಣ್ಣ ಖಂಡ್ರೆ .— ಸ್ವಾಮಿ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು .— ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವೇ ಇಲ್ಲ.

(ಗೊಂದಲ)

ಶ್ರೀ ಬಿ. ರಾಚಯ್ಯ .— ಮಾನ್ಯ ಅಧ್ಯಕ್ಷರೆ.....

ಶ್ರೀ ಎಸ್. ಬಂಗಾರಪ್ಪ .— ಮಾನ್ಯ ಅಧ್ಯಕ್ಷರೆ, ಮಾನ್ಯಸಚಿವರು ಏನು ಹೇಳುತ್ತಿದ್ದಾರೆ

ಅಧ್ಯಕ್ಷರು .— ಮಾನ್ಯ ಸದಸ್ಯರಾದ ಕೃಷ್ಣನ್‌ರವರ ಗಮನ ಸೆಳೆಯುವ ಸೂಚನೆಗೆ ಸಚಿವರು ಹೇಳಿಕೆ ಕೊಡುತ್ತಿದ್ದಾರೆ...